[Govt. of Karnataka C.R.P. 67]

| Deposition Sheets<br>(RP.No.57)<br>Form No.4 (Civil) |
|---|

**IN THE COURT OF CIVIL JUDGE & J.M.F.C., KARKALA.**

**Criminal Case No. 1560/2022**

**.................................................Vs....................................**

ಸಾಕ್ಷಿದಾರನ ಹೆಸರು ಃ ಮೂರ್ತಿ ಕೆ

ತಂದೆಯ ಹೆಸರುಃ ಕೃಷ್ಣ ಪಿ.ಡಬ್ಲ್ಯೂಃ 11

ಪ್ರಾಯ ಃ 51 ವರ್ಷ ಸಿ.ಡಬ್ಲ್ಯೂಃ 15

ಉದ್ಯೋಗ ಃ ಹೆಚ್ ಸಿ 2130, ಅಜೆಕಾರು ಠಾಣೆ

ವಾಸ ಃ ಕಾರ್ಕಳ

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು. ದಿಃ 28-01-2026

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ನಾನು 2015 ರಿಂದ 2024 ರವರೆಗೆ ಕಾರ್ಕಳ ನಗರ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 28-02-2022 ರಂದು ನಾನು ಠಾಣೆಯಲ್ಲಿರುವಾಗ ಚಾಸಾ-19 ರವರು ಕಾರ್ಕಳ ನಗರ ಠಾಣಾ ಅಕ್ರ ನಂಬರ್ 33/2022 ರ 1 ನೇ ಆರೋಪಿ ರವರನ್ನು ಕರೆದುಕೊಂಡು ಹಾಜರುಪಡಿಸುವಂತೆ ಆದೇಶಿಸಿದ್ದು, ಅದರಂತೆ ಚಾಸಾ-14 ರವರೊಂದಿಗೆ 1 ನೇ ಆರೋಪಿಯನ್ನು ರಾತ್ರಿ 10.00 ಗಂಟೆಗೆ ಜಾರ್ಕಳದ ಜಂಕ್ಷನ್ ನಿಂದ ಅವರ ಮೋಟಾರು ಸೈಕಲ್ ನಂಬರ್ ಕೆ.ಎ.20.ಇ.ಯು-7989 ಸಮೇತ ಆರೋಪಿ ಹಾಗೂ ಬೈಕನ್ನು ಚಾಸಾ-19 ರವರ ಮುಂದೆ ರಾತ್ರಿ 10.30 ಗಂಟೆಗೆ ಹಾಜರುಪಡಿಸಿರುತ್ತೇವೆ. 1 ನೇ ಆರೋಪಿ ಹಾಗೂ ಅವರ ಬೈಕನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1 ನೇಆರೋಪಿ ಹಾಗೂ ನಿಪಿ-4 ರಿಂದ 7 ಬೈಕ್ ನ ಭಾವಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿತರ ಪರಃ ಶ್ರೀ ಎನ್.ಎಮ್.ಜೆ. ವಕೀಲರಿಂದಃ</u>

ಚಾಸಾ-1 ರವರು 2 ವರ್ಷಗಳ ಕಾಲ ನನ್ನ ಸಹೋದ್ಯೋಗಿಯಾಗಿದ್ದರು. ಅವರ ಪರಿಚಯ ಇಲಾಖೆ ಸೇರಿದ ದಿನದಿಂದ ಇದೆ. ಚಾಸಾ-1 ಹಾಗೂ ಅವರ ಗಂಡನ ನಡುವೆ ಉಡುಪಿ ನ್ಯಾಯಾಲಯದಲ್ಲಿ ವಿಚ್ಛೇಧನಾ ಪ್ರಕರಣ ನಡೆಯುತ್ತಿತ್ತು ಎಂದರೆ ಗೊತ್ತಿಲ್ಲ. ನಾನು ಮತ್ತು ಚಾಸಾ-14 ರವರು ಅವರ ಬೈಕಿನಲ್ಲಿ 1 ನೇ ಆರೋಪಿಯ ಪತ್ತೆಗೆ ಹೋಗಿರುತ್ತೇವೆ. ಚಾಸಾ-14 ರವರು ಕಾರ್ಕಳ ಗ್ರಾಮಾಂತರ ಠಾಣೆಯಲ್ಲಿ ಕೆಲಸ ಮಾಡುತ್ತಿದ್ದರು. ಪ್ರಶ್ನಿತ ತಕ್ಷೀರು ಸಮಯದಲ್ಲಿ ಚಾಸಾ-1 ರವರು ಗ್ರಾಮಾಂತರ ಠಾಣೆಯಲ್ಲಿ ಕೆಲಸ ಮಾಡುತ್ತಿದ್ದರು. ನನಗೆ 1 ನೇ ಆರೋಪಿಯ ಪರಿಚಯ ಇರಲಿಲ್ಲ. ಅವರ ಮನೆ ಜಾರ್ಕಳ ಎಂದು ಗೊತ್ತಿತ್ತು. 1 ನೇ ಆರೋಪಿಯ ಗುರುತನ್ನು ಬಾತ್ಮೀದಾರರು ಹೇಳಿರುತ್ತಾರೆ. 1 ನೇ ಆರೋಪಿಯ ವಿಚಾರಿಸಿ, ಠಾಣೆಗೆ ಕರೆದುಕೊಂಡು ಬಂದಿದ್ದು ಅವರು ಓಡಲು ಪ್ರಯತ್ನಿಸಿರುವುದಿಲ್ಲ. ನಾವು ಯಾವುದೇ ಮಹಜರು ಮಾಡಿರುವುದಿಲ್ಲ. ಆರೋಪಿಯ ಬೈಕನ್ನು ನಾನೇ ಚಲಾಯಿಸಿಕೊಂಡು ಬಂದಿರುತ್ತೇನೆ. 1 ನೇ ಆರೋಪಿಯನ್ನು ಹಾಗೂ ಅವರ ಬೈಕನ್ನು ನಾನು, ಚಾಸಾ -1 ಹಾಗೂ ಇತರೇ ಸಿಬ್ಬಂದಿಗಳು ಸೇರಿ ಅವರ ಮನೆಯಿಂದ ಕರೆದುಕೊಂಡು ಬಂದಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ